## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

**ಸಿಸಿ ನಂಃ 226 ಃ 2012**

ಪಿಡಬ್ಲೂ ಃ 3
ಸಿಡಬ್ಲೂ ಃ 6

| | |
|---|---|
| ಸಾಕ್ಷಿಯ ಹೆಸರು | ಃ ಬಸಪ್ಪಾ |
| ತಂದೆಯ ಹೆಸರು | ಃ ಶಿವಸಂಗಪ್ಪಾ ಸಂಗಮಶೆಟ್ಟರ |
| ವಯಸ್ಸು | ಃ 56 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸ ಸ್ಥಳ | ಃ ಹುಬ್ಬಳ್ಳಿ |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಃಕರಿಸಿದ ದಿನಾಂಕಃ **01-10-2015**

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರ ಮೇಲಿದ್ದ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆ ಜಪ್ತು ಮಹಜರಾಗಿದ್ದು ಅದರಲ್ಲಿ ನಮೂದಿಸಿದ ಅಂಶಗಳ ಬಗ್ಗೆ ಮಾಹಿತಿ ಇಲ್ಲ . ಸದರಿ ದಾಖಲೆ ಈಗಾಗಲೇ ನಿಶಾನೆ ಪಿ-5 ರಡಿಯಲ್ಲಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಶಾನೆ ಪಿ-5ಎ ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ಈಗ 7 ವರ್ಷಗಳ ಹಿಂದೆ ಉಪ ನಗರ ಪೊಲೀಸ ಠಾಣೆಯಲ್ಲಿ ಪೊಲೀಸರ ಕೋರಿಕೆ ಮೇರೆಗೆ ಮಾಡಿದ್ದು ಅದರಲ್ಲಿ ನಮೂದಿಸಿದ ಅಂಶಗಳ ಬಗ್ಗೆ ಮತ್ತು ಪ್ರಕರಣದ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ. ನನಗೆ ಈ ಪ್ರಕರಣದ ಅನಂತ ಕೊಳ್ಳುರ ಎಂಬ ಮ್ಯಾನಜರ ಪರಿಚಯವಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ದಾಖಲಾತಿಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಹಾಗೂ ಜಪ್ತುಪಡಿಸಿಕೊಳ್ಳಲಾದ ಚೆಕ್ಕುಗಳನ್ನು ನಾನು ನೋಡಿರುವುದಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣ'ಸಿ ಪಾಟಿ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಪಂಚನಾಮೆಯನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲು ಎಪಿಪಿ ಯವರಿಂದಃ

2. ದಿನಾಂಕಃ 10-10-2000 ರಂದು ಸಾಯಂಕಾಲ 4 ರಿಂದ 5.30 ಗಂಟೆ ಅವಧಿಯಲ್ಲಿ ನನ್ನನ್ನು ಉಪ ನಗರ ಪೊಲೀಸ ಠಾಣೆಗೆ ಕರೆಯಿಸಿದ್ದು ನನ್ನ ಹಾಗೂ ಚಾಸಾ-7 ರ ಸಮಕ್ಷಮ ಪೊಲೀಸರು ಸಾಕ್ಷಿದಾರರಾದ ಅನಂತ ಮನೋಹರ ಕೊಳ್ಳುರ ಇವರು ಹಾಜರುಪಡಿಸಿದ ಒಟ್ಟು 25 ಚೆಕ್ಕುಗಳನ್ನು ನಮ್ಮ ಸಮಕ್ಷಮ ಪೊಲೀಸರು ಜಪ್ತುಪಡಿಸಿಕೊಂಡು

ಸಿಸಿ ನಂಃ **226 ಃ 2012**
ಪಿಡಬ್ಲೂ ಃ **3**

ನಿಶಾನೆ ಪಿ–5 ರಂತೆ ಜಪ್ತು ಮಹಜರ ಮಾಡಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ಹಾಜರಿದ್ದು ಸದರಿ ಮಹಜರಿಗೆ ಓದಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಜಪ್ತುಪಡಿಸಿಕೊಂಡ ಚೆಕ್ಕುಗಳ ನಂಃ **052451** ರಿಂದ **052474** ರವರೆಗೆ ಹಾಗೂ **158432** ಸಂಖ್ಯೆಯ ಎಮ್‌ಜಿ ಬ್ಯಾಂಕ ಮುಖ್ಯ ಶಾಖೆ ಧಾರವಾಡಕ್ಕೆ ಸಂಬಂಧಿದ ಚೆಕ್ಕುಗಳನ್ನು ಅದರ ಮ್ಯಾನೇಜರ ಅನಂತರ ಕೊಳ್ಳುರು ಇವರು ಹಾಜರಪಡಿಸಿದ್ದರು ಎಂದರೆ ಸರಿಯಲ್ಲ.

3. ನಿಶಾನೆ ಪಿ–5 ರಲ್ಲಿ ನಮೂದಿಸಿದ ಅಂಶಗಳ ಬಗ್ಗೆ ಮಾಹಿತಿ ಇದ್ದರೂ ಕೂಡಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಅಂತಾ ಹೇಳಿರುತ್ತಾರೆ.

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.